**<u>ಸಾಕ್ಷಿಯನ್ನು ದಿನಾಂಕ *20.09.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ದಿನಾಂಕ 10.06.2024 ರಂದು ಕಾವೇರಿ ಆಸ್ಪತ್ರೆಗೆ ಮೃತೆ ರಶ್ಮಿಯನ್ನು ಕರೆದುಕೊಂಡು ಹೋದಾಗ ನನ್ನ ಭಾವ ಇದ್ದರು. ದಿನಾಂಕ 10.06.2024 ರಂದು ನಾನು ಪೊಲೀಸರಿಗೆ ನನ್ನ ದೂರನ್ನು ಕೊಟ್ಟಾಗ ನನ್ನ ಭಾವ ಮಂಜೇಶ್ ಇದ್ದರು. ಆ ವೇಳೆಯಲ್ಲಿ ನನ್ನ ಭಾವ ಮಂಜೇಶ್ ಆರೋಪಿತನ ಬಗ್ಗೆ ಏನನ್ನು ಹೇಳಿರಲಿಲ್ಲ. ನಾನು ನನ್ನ ದೂರಿನಲ್ಲಿ ದಿನಾಂಕ 10.06.2024 ರಂದು ಸಂಜೆ 4.00 ಗಂಟೆಗೆ ನನ್ನ ತಂಗಿ ಮನೆಗೆ ಹೋಗಿದ್ದೆ ಅಂತ ಹೇಳಿರುತ್ತೇನೆ. ದೂರನ್ನು ಬರೆದ ಮೇಲೆ ನಾನು ಪುನಃ ದೂರನ್ನು ಓದಿ ನೋಡಿ ಸಹಿ ಮಾಡಿ ಕೊಟ್ಟದ್ದೆ. ನಾನು ದೂರಿನಲ್ಲಿ ದಿನಾಂಕ 10.06.2024 ರಂದು 3.30 ಗಂಟೆಗೆ ತಂಗಿ ಮನೆಗೆ ಹೋಗಿದ್ದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ನನ್ನ ತಂಗಿಯನ್ನು ನೋಡಿದಾಗ ಆಕೆಯ ದೇಹದ ತಾಪಮಾನ ತಣ್ಣಗಿತ್ತು. ನಾನು ನನ್ನ ತಂಗಿಯ ಅಕ್ಕಪಕ್ಕದ ಮನೆಯವರಿಗೆ ತಂಗಿಯನ್ನು ಕೊನೆಯದಾಗಿ ಎಷ್ಟು ಗಂಟೆಗೆ ನೋಡಿದ್ದೀರಿ ಎಂದು ಕೇಳಿರಲಿಲ್ಲ. ದಿನಾಂಕ 10.06.2024 ರಂದು ನನ್ನ ತಂಗಿಯ ಅಕ್ಕಪಕ್ಕದ ಮನೆಯವರು ಆರೋಪಿತನು ನನ್ನ ತಂಗಿಯ ಮನೆಗೆ ಬಂದು ಹೋಗಿದ್ದರ ಬಗ್ಗೆ ಹೇಳಿರಲಿಲ್ಲ. ನನ್ನ ತಂಗಿ ವಾಸವಾಗಿದ್ದ ಕಟ್ಟಡದಲ್ಲಿ 2 ಫ್ಲೋರ್ ಇರುತ್ತದೆ. ನನ್ನ ತಂಗಿ ವಾಸವಾಗಿದ್ದ ಮನೆಯ ಅಕ್ಕಪಕ್ಕದಲ್ಲಿ ಮನೆಗಳು ಇರುತ್ತವೆ. ಯಾರಾದರೂ ಗಲಾಟೆ ಮಾಡಿಕೊಂಡರೆ ಮತ್ತು ಕಿರುಚಿಕೊಂಡರೆ ಅಕ್ಕಪಕ್ಕದ ಮನೆಯವರಿಗೆ ಕೇಳಿಸುತ್ತದೆ ಎಂದರೆ ಸರಿ. ದಿನಾಂಕ 10.06.2024 ರಂದು ಆಗಲೀ ದಿನಾಂಕ

11.06.2024 ರಂದು ಆಗಲಿ ನನ್ನ ತಂಗಿಯ ಮನೆಯಲ್ಲಿ ಜಗಳ ಆಗಿದ್ದರ ಬಗ್ಗೆಯಾಗಲೀ ಮತ್ತು ಕಿರುಚಿಕೊಂಡಿದ್ದರ ಬಗ್ಗೆಯಾಗಲೀ ಅಕ್ಕಪಕ್ಕದವರು ಯಾರು ಹೇಳಿರಲಿಲ್ಲ.

ನನಗೂ ಮತ್ತು ಆರೋಪಿತನಿಗೂ ಈ ಮೊದಲು ಪರಿಚಯ ಇರಲಿಲ್ಲ. ನನ್ನ ಭಾವ ಮಂಜೇಶ್ ಆರೋಪಿತನು ತಂಗಿಯ ಮನೆಗೆ ಬರುವ ವಿಚಾರದಲ್ಲಿ ತಂಗಿಯೊಂದಿಗೆ ಜಗಳ ಆಡಿರಲಿಲ್ಲ. ನಾನು ದಿನಾಂಕ 10.06.2024 ರಂದು ಆರೋಪಿತ ನನ್ನ ಭಾವ ಮಂಜೇಶನಿಗೆ ಫೋನ್ ಮಾಡಿದ್ದರ ಬಗ್ಗೆ ಮತ್ತು ನನ್ನ ಭಾವ ಮಂಜೇಶ್ ಆರೋಪಿತನಿಗೆ ಫೋನ್ ಮಾಡಿದ್ದರ ಬಗ್ಗೆ ದೂರಿನಲ್ಲಿ ಹೇಳಿರುತ್ತೇನೆ. ನಾನು ದಿನಾಂಕ 10.06.2024 ರಂದು ಕೊಟ್ಟಂತಹ ದೂರಿನಲ್ಲಾಗಲೀ ದಿನಾಂಕ 11.06.2024 ರಂದು ಕೊಟ್ಟಂತಹ ದೂರಿನಲ್ಲಿ ಆಗಲೀ ಆರೋಪಿತ ನನ್ನ ಭಾವ ಮಂಜೇಶನಿಗೆ ಫೋನ್ ಮಾಡಿದ್ದರ ಬಗ್ಗೆ ಮತ್ತು ನನ್ನ ಭಾವ ಮಂಜೇಶ್ ಆರೋಪಿತನಿಗೆ ಫೋನ್ ಮಾಡಿದ್ದರ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ನನ್ನ ಭಾವ ಮಂಜೇಶ್ ನಿಗೆ ಫೋನ್ ಮಾಡಿ ಮೃತ ರಶ್ಮಿ ಬೆಕ್ಕಿನ ಮರಿಯನ್ನು ಕೇಳಿದ್ದು ಅದನ್ನು ತೆಗೆದುಕೊಂಡು ಮನೆಗೆ ಹೋಗುತ್ತಿದ್ದೇನೆ ಎಂದು ಹೇಳಿದ್ದ ಎನ್ನುವ ವಿಚಾರವನ್ನು ದೂರಿನಲ್ಲಿಯಾಗಲೀ ಅಥವಾ ನನ್ನ ಹೇಳಿಕೆಯಲ್ಲಾಗಲೀ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 10.06.2024 ರಂದೇ ಆರೋಪಿತನನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದರು. ದಿನಾಂಕ 10.06.2024 ರಂದು ಆರೋಪಿತನ ಮೇಲೆ ತನಗೆ ಸಂಶಯ ಇರುತ್ತದೆ ಎಂದು ಪೊಲೀಸರಿಗೆ ತಿಳಿಸಿದ್ದೆ ಆದರೆ ದೂರಿನಲ್ಲಿ ಹೇಳಿರಲಿಲ್ಲ. ಆರೋಪಿತನ ಮೊಬೈಲ್ ಅನ್ನು ನಾನು ನೋಡಿದ್ದೆ ಎಂದು ಹೇಳಿದ ವೇಳೆಯಲ್ಲಿ ಆರೋಪಿತನು ನನ್ನ ತಂಗಿಗೆ ಬೆಳಗ್ಗೆ ಅಂದಾಜು 11.00 ಗಂಟೆಗೆ ಮತ್ತೊಂದು ಕಾಲನ್ನು ಅದೇ ದಿವಸ ಮಾಡಿದ್ದು ಎಷ್ಟು ಗಂಟೆಗೆ ಎಂದು ನಿರ್ದಿಷ್ಟವಾಗಿ

ಹೇಳಲು ಆಗುವುದಿಲ್ಲ. ದಿನಾಂಕ 10.06.2024 ರಂದು ನನ್ನ ಭಾವ ಮಂಜೇಶ್ ನನ್ನ ತಂಗಿಗೆ ಫೋನ್ ಮಾಡಿದ್ದರ ಬಗ್ಗೆ ಗೊತ್ತಿರುವುದಿಲ್ಲ. ದಿನಾಂಕ 10.06.2024 ರಂದು ಆರೋಪಿತ ನನ್ನ ಭಾವ ಮಂಜೇಶ್ ಅವರಿಗೆ ಫೋನ್ ಮಾಡಿರುತ್ತಾರೆ ಆದರೆ ನನ್ನ ಭಾವ ಆರೋಪಿತನಿಗೆ ಫೋನ್ ಮಾಡಿರುವುದಿಲ್ಲ. ನನ್ನ ಭಾವ ಮಂಜೇಶ್ ನನ್ನ ತಂಗಿ ರಶ್ಮಿಗೆ ದಿನಾಂಕ 10.06.2024 ರಂದು ಎಷ್ಟು ಗಂಟೆಗೆ ಫೋನ್ ಮಾಡಿದ್ದರು ಎಂದು ತಿಳಿಸಿರಲಿಲ್ಲ.

ನನ್ನ ಮನೆಯಿಂದ ನನ್ನ ತಂಗಿ ರಶ್ಮಿ ಇದ್ದಂತಹ ಮನೆಗೆ ಸುಮಾರು 500 ಮೀಟರ್ ಅಂತರ ಇತ್ತು. ದಿನಾಂಕ 10.06.2024 ರಂದು ನನ್ನ ಭಾವ ಮಂಜೇಶ್ ನನ್ನ ತಂಗಿಯ ಮನೆಯಿಂದ ಸುಮಾರು 6-7 ಕಿ.ಮೀಟರ್ ಅಂತರದಲ್ಲಿ ಕೆಲಸಕ್ಕೆ ಹೋಗಿದ್ದರು. ನನ್ನ ತಂಗಿಯ ಮಗಳು ದಿನಾಂಕ 10.06.2024 ರಂದು ಮನೆಗೆ  ಎಷ್ಟು ಗಂಟೆಗೆ ಬಂದಿದ್ದಳು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.   ನನ್ನ ತಂಗಿಯ ಮಗಳು ದಿನಾಂಕ 10.06.2024 ರಂದು ಪ್ರಸನ್ನ ರವರನ್ನು ಎಷ್ಟು ಗಂಟೆಗೆ ಹೋಗಿ ನೋಡಿದ್ದಳು ಎನ್ನುವ ಬಗ್ಗೆ ನನಗೆ ಸಮಯ ಗೊತ್ತಿಲ್ಲ. ನನ್ನ ಭಾವ ಮಂಜೇಶ್ ಗೆ ವಿಷಯವನ್ನು ಪ್ರಸನ್ನ ರವರು ತಿಳಿಸಿರುತ್ತಾರೆ ಎಂದು ಗೊತ್ತಾಗಿತ್ತು. ನಾನು ನನ್ನ ತಂಗಿಯ ಮನೆಗೆ ಹೋಗುವುದರೊಳಗಾಗಿ ನನ್ನ ಭಾವ ಮಂಜೇಶ್ ಮನೆಯಲ್ಲಿ ಇದ್ದರು. ಆ ಸಮಯದಲ್ಲಿ ನನ್ನ ಭಾವ ಮಂಜೇಶ್ ಆರೋಪಿತನು ನನ್ನ ಭಾವ ಮಂಜೇಶ್ ಗೆ ಫೋನ್ ಮಾಡಿದ್ದರ ವಿಚಾರವನ್ನು ಹೇಳಿರಲಿಲ್ಲ. ದಿನಾಂಕ 11.06.2024 ರಂದು ನಾನು 2 ನೇ ಬಾರಿ ದೂರನ್ನು ಕೊಡುವವರೆಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಪೊಲೀಸ್ ವಶದಲ್ಲಿ ಇದ್ದರು. ದಿನಾಂಕ 10.06.2024 ರಿಂದ ದಿನಾಂಕ 11.06.2024 ರವರೆಗೆ ಆರೋಪಿತನು ಪೊಲೀಸರು ವಶದಲ್ಲಿ ಇದ್ದ ಎಂದು ಹೇಳುವ ವೇಳೆಯಲ್ಲಿ ನನ್ನ ತಂಗಿಯ ಫೋನ್ ಅನ್ನು ನಾನು

ನೋಡಿರುವುದಿಲ್ಲ. ದಿನಾಂಕ 11.06.2024 ರಂದು ನನ್ನ ತಂಗಿಯ ಅಂತ್ಯಸಂಸ್ಕಾರವನ್ನು ಸುಮಾರು ಸಂಜೆ 4.00 ಗಂಟೆಗೆ ಮಾಡಿ ಪೊಲೀಸ್ ಠಾಣೆಗೆ 2 ನೇ ದೂರನ್ನು ಕೊಡಲು ಹೋದಾಗ ಆರೋಪಿತನು ನನ್ನ ತಂಗಿಯ ಮೊಬೈಲ್ ಅನ್ನು ತೆಗೆದುಕೊಂಡು ಹೋಗಿರುತ್ತಾನೆ ಎಂದು ಗೊತ್ತಾಗಿತ್ತು. ನನಗೆ ದಿನಾಂಕ 11.06.2024 ರಂದು ಪೊಲೀಸ್ ಠಾಣೆಗೆ ನಿರ್ದಿಷ್ಟವಾಗಿ ಎಷ್ಟು ಗಂಟೆಗೆ ಹೋಗಿದ್ದೆ ಎಂದು ಹೇಳಲು ಬರುವುದಿಲ್ಲ. ಆ ನಂತರ ಪೊಲೀಸರು ನನ್ನ ತಂಗಿಯ ಮೊಬೈಲ್ ಅನ್ನು ತೋರಿಸಿರಲಿಲ್ಲ. ನನ್ನ ತಂಗಿಯ ಕುತ್ತಿಗೆಯ ಬಲಭಾಗದಲ್ಲಿ ರಕ್ತ ಹೆಪ್ಪೆಗಟ್ಟಿದ್ದನ್ನು ಹೊರತುಪಡಿಸಿದರೆ ಕುತ್ತಿಗೆ ಸುತ್ತಲು ರಕ್ತ ಹೆಪ್ಪುಗಟ್ಟಿರಲಿಲ್ಲ ಎಂದರೆ ಕುತ್ತಿಗೆಯ ಬಲಭಾಗದಲ್ಲಿ ರಕ್ತ ಹೆಪ್ಪೆಗಟ್ಟಿತ್ತು ಸುತ್ತಲು ಮಾರ್ಕ್ ಇತ್ತು. ನಾನು ದೂರಿನಲ್ಲಿ ನನ್ನ ತಂಗಿಯ ಕತ್ತಿನ ಸುತ್ತಲು ಮಾರ್ಕ್ ಗಳು ಇದ್ದ ಬಗ್ಗೆ ಹೇಳಿರುತ್ತೇನೆ. ನಾನು ದೂರಿನಲ್ಲಿ ತಂಗಿಯ ಕತ್ತಿನ ಸುತ್ತಲು ಮಾರ್ಕ್ ಗಳು ಇದ್ದ ಬಗ್ಗೆ ಹೇಳದೇ ಇದ್ದರೂ ಸಹ ಹೇಳಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿಯ ಕುತ್ತಿಗೆಯ ಸುತ್ತ ಇದ್ದಂತಹ ಮಾರ್ಕ್ ಗಳು 6 m.m. ಅಳತೆಯ ಮಾರ್ಕ್ ಗಳು ಇದ್ದವು. ನಾನು ಈಗ ನೋಡುತ್ತಿರುವ ನಿಪಿ–5 ರ ಫೋಟೋದಲ್ಲಿ ಮಾತ್ರ ಕುತ್ತಿಗೆ ಯ ಬಲಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ್ದು ಕಾಣಿಸುತ್ತಿದ್ದು ನಿಪಿ–6 ರ ಫೋಟೋದಲ್ಲಿ ಯಾವುದೇ ರಕ್ತ ಹೆಪ್ಪುಗಟ್ಟಿದ ಮಾರ್ಕ್ ಗಳು ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿಯ ಎಡಭಾಗದ ಕುತ್ತಿಗೆಯ ಹತ್ತಿರ ನಾನು ಹೇಳುವಂತೆ 6 m.m. ಅಳತೆಯ ಯಾವುದೇ ರಕ್ತ ಹೆಪ್ಪುಗಟ್ಟಿದ ಮಾರ್ಕ್ ಗಳು ಇರಲಿಲ್ಲ ಎಂದರೆ ಸರಿಯಲ್ಲ.

ದಿನಾಂಕ 10.06.2024 ರಂದು ನಾನು ಮೊದಲ ಬಾರಿಗೆ ನನ್ನ ತಂಗಿಯನ್ನು ನೋಡಿದಾಗ ನನ್ನ ತಂಗಿಯ ಕಣ್ಣುಗಳು ಮುಚ್ಚಿಕೊಂಡಿದ್ದವು. ನಾಲಿಗೆ ಬಾಯಿಂದ ಹೊರಗಡೆ

ಬಂದಿರಲಿಲ್ಲ. ನನ್ನ ತಂಗಿಯ ಸಾವಿಗೆ ಆರೋಪಿತನು ಯಾವುದೇ ರೀತಿಯಲ್ಲಿ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಭಾವ ಮಂಜೇಶ್ ಆರೋಪಿತನ ಕಡೆಯಿಂದ ಸಾಲ ತೆಗೆದುಕೊಂಡಿದ್ದರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 10.06.2024 ರಂದು ದೂರನ್ನು ಕೊಟ್ಟಾಗಿನಿಂದ ನಾನು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುವವರೆಗೆ ನನ್ನ ಭಾವ ಮಂಜೇಶ್ ಆರೋಪಿ ಮತ್ತು ನನ್ನ ಭಾವನ ನಡುವೆ ಹಣದ ವ್ಯವಹಾರ ಆಗಿದ್ದರ ಬಗ್ಗೆ ಹೇಳಿದ್ದರು. ನನ್ನ ಭಾವ ಮಂಜೇಶ್ ಆರೋಪಿತನ ಕಡೆಯಿಂದ ಎಷ್ಟು ಹಣ ಸಾಲವಾಗಿ ತೆಗೆದುಕೊಂಡಿದ್ದರು ಎಂದು ಗೊತ್ತಿರುವುದಿಲ್ಲ. ಹಣದ ವಿಚಾರದಲ್ಲಿ ನನ್ನ ಭಾವನಿಗೂ ಮತ್ತು ಆರೋಪಿತನಿಗೂ ಯಾವುದೇ ಜಗಳ ಆಗಿರುವುದಿಲ್ಲ. ಆರೋಪಿತನು ನನ್ನ ಭಾವನಿಗೆ ಹಣ ವಾಪಸ್ಸು ಕೊಡುವಂತೆ ಕೇಳುತ್ತಿದ್ದರಿಂದ ನಾನು ಮತ್ತು ನನ್ನ ಭಾವ ಸೇರಿ ಆರೋಪಿತನನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ದಿನಾಂಕ 10.06.2024 ರಂದು ನಾನು ಕೊಟ್ಟಂತಹ ದೂರಿನಲ್ಲಿ ಆರೋಪಿತನ ಮೇಲೆ ಯಾವುದೇ ಸಂಶಯವನ್ನು ವ್ಯಕ್ತಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು